ಅಜ್ಜನೊಬ್ಬ ಅಜ್ಜಗೆ ನಗುತ್ತಾ ಯಾಕ್‌ನ ಮೈಮೇಲಿನ ತುಪ್ಪಳಕ್ಕೆ ಬಣ್ಣಹಾಕಿ ಉದ್ದದ ನಿಲುವಂಗಿಗಳನ್ನು ಹೊಲಿಯುತ್ತಿದ್ದ. ನಾವು ಹೋದಾಗ ಹೊಲಿಗೆಯಂತ್ರದ ಸೂಜಿಯ ಕಣ್ಣಿಗೆ ಬರಿಗಣ್ಣಿನಲ್ಲೇ ದಾರ ಪೋಣಿಸುತ್ತಿದ್ದ. 'ನೀವು ಎಲ್ಲಿಂದ ಬಂದಿರಿ? ಯಾವಾಗ? ಹೇಗೆ ಬದುಕುತ್ತಿದ್ದೀರಿ' ಎಂದು ಮತ್ತೆ ಮತ್ತೆ ಕೇಳಿ ಆ ಹಳೆಯ ಜೀವಗಳ ಮೇಲೆ ಪ್ರಶ್ನೆಗಳ ಹಲ್ಲೆ ಮುಂದುವರಿಸಲು ಮನಸು ಒಪ್ಪುತ್ತಿರಲಿಲ್ಲ.

ಕ್ಯಾಂಪಿನ ಜೋಪಡಿಗಳಲ್ಲಿ ಬಟ್ಟೆ ನೇಯುವ, ಸ್ವೆಟರ್ ಹೆಣೆಯುವ, ಬಡಗಿತನ ಮಾಡುವ ಹಲವು ಜನರ ನಡುವೆ ವಯಸ್ಸಾದ ಹೆಣ್ಣುಮಗಳೊಬ್ಬಳು ತಲ್ಲೀನಳಾಗಿ ನೀರಿನಲ್ಲಿ ಬ್ರಶ್ ಅದ್ದಿ ಜಲವರ್ಣದ ಚಿತ್ರಗಳನ್ನು ಬಿಡಿಸುತ್ತಿದ್ದಳು. ಅವಳ ಪಕ್ಕ ದೂಳು ಹಿಡಿದ ಮಾಸಲು ಕಿಟಕಿಯ ಗಾಜಿನ ಮೇಲೆ 'ಯುನೈಟೆಡ್ ನೇಷನ್ ವಿ ವಾಂಟ್ ಜಸ್ಟೀಸ್– ತಿಬ್ಬತ್ ಕೋ ಬಚಾವೋ' ಎಂಬ ಘೋಷಣೆಗಳಿದ್ದವು. ಸಂಜೆ ಮೂರು ಗಂಟೆಗಾಗಲೇ ಮಂಜು ಅಡರುತ್ತಿದ್ದ ಆ ಹಗಲಿನಲ್ಲಿ ಅಲ್ಲಿ ಬರೆದಿದ್ದ ಮಾತುಗಳು ಅಸಹಾಯಕ ಚೀತ್ಕಾರದಂತಿರದೆ, ದೃಢಸಂಕಲ್ಪದ ಪ್ರತಿಜ್ಞೆಯಂತೆ ಕಾಣಿಸಿದವು.

ಅವರನ್ನು ಮಾತನಾಡಿಸದಿದ್ದರೆ ಪ್ರಯೋಗಾಲಯದ ಬಲಿಪಶುಗಳಂತೆ ಕಂಡುಬಿಡಬಹುದೆಂಬ ಪಾಪಪ್ರಜ್ಞೆಯಿಂದ ಮಾತಾಡಿಸಿದೆ. ಅಲ್ಲಿ ನಿಮ್ಮವರು ಯಾರಿದ್ದಾರೆ? ಟಿಬೆಟಿಗೆ ಹೋಗಲು ಬಿಟ್ಟರೆ ಹೋಗುವಿರಾ ಎಂದು ಕೇಳಿದೆ. ಆಕೆ ನಕ್ಕು 'ಅಲ್ಲಿ ಹೋದರೆ ನಮ್ಮವರು ಯಾರೂ ಇಲ್ಲ. ಹೋಗುವ ಅವಕಾಶ ಸಿಕ್ಕರೆ ಖಂಡಿತ ಹೋಗುತ್ತೇವೆ. ಅಲ್ಲಿಯವರೆಗೆ ನಾವು ಇಲ್ಲಿಯವರೇ' ಎಂದಳು. ದೇಶ–ಗಡಿ, ನಾವು–ಅವರು ಎಂಬ ವಿಭಜನೆಗಳು ಮನುಷ್ಯಕುಲವನ್ನೇ ಸೀಳಿಹಾಕುತ್ತಿರುವ ಕಾಲದಲ್ಲಿ 'ಹುಟ್ಟುವ ನೆಲವೊಂದೇ ನಮ್ಮದಲ್ಲ, ಮೆಟ್ಟಿದ ನೆಲವೂ ನಮ್ಮದೇ' ಎಂಬ ನಂಬಿಕೆಯಿಂದ ಬದುಕುತ್ತಿರುವ ಅವರು, ಅವರನ್ನು ಅವರಂತೆ ನಿರುಮ್ಮಳವಾಗಿ ಬದುಕಲು ಬಿಟ್ಟಿರುವ ನಮ್ಮ ದೇಶ – ಎರಡರ ಬಗ್ಗೆಯೂ ಇಂಚುಗಳ ಲೆಕ್ಕ ಮೀರಿದ ಹೆಮ್ಮೆಯಿಂದ ಎದೆ ಇನ್ನಷ್ಟು ವಿಸ್ತಾರವಾಯಿತು.

ನೆಲೆ ತಪ್ಪಿದ ಟಿಬೆಟಿನ ಜನರನ್ನು ಭಾರತ 'ನಿರಾಶ್ರಿತ'ರೆಂದು ಕಾಣದೆ 'ವಲಸೆ ಬಂದವರು' ಎಂಬಂತೆ ನೋಡುವುದೇ ಅವರಿಗೀಗ ಹೆಮ್ಮೆಯ ಸಂಗತಿ. ದಶಕಗಳಿಂದ ಕಾಯುತ್ತ ಅಲ್ಲಿ ಬದುಕಿರುವ ಜನರೆಲ್ಲ ಈಗ ಚಿತ್ರಪಟಗಳಲ್ಲಿ ಕಾಣುವ ಮಾಸಲು ಕುರುಹುಗಳಂತೆ ಬದಲಾಗಿದ್ದಾರೆ. ಕೇವಲ ನಾಲ್ಕು ಜನರಿಂದ ಶುರುವಾದ ಕ್ಯಾಂಪಿನಲ್ಲಿ ಗುಡ್ಡವನ್ನು ಜರುಗಿಸಿ ಸಮಮಾಡಿ ತಮಗೊಂದು ತಾವನ್ನು ಮಾಡಿಕೊಂಡಿದ್ದು, ಹಾಗೇ ಅಲ್ಲೊಂದು ಸ್ಕೂಲು ಕಟ್ಟಿಕೊಂಡದ್ದು, ನೆಹರೂ, ರಾಜೀವಗಾಂಧಿ ಮೊದಲಾದವರೆಲ್ಲ ಬಂದು ಹೋದದ್ದು ಎಲ್ಲವೂ ಪಟಗಳಲ್ಲಿ ದಾಖಲಾಗಿದೆ. ಟಿಬೆಟನ್ನರು ಗುಂಡಾಗಿರುವುದನ್ನೆಲ್ಲ ಪವಿತ್ರವೆಂದು ನಂಬಿ ಎಷ್ಟೋ ದಿನ ಕಾಲಲ್ಲಿ ಜಾಡಿಸುವ ಫುಟ್ಬಾಲ್ ಆಡದೇ ಇದ್ದದ್ದು, ನಿಧಾನಕ್ಕೆ ಅಲ್ಲೊಂದು ಆಟದ ಬಯಲನ್ನು ಕಟ್ಟಿಕೊಂಡದ್ದು, ಎಲ್ಲವೂ ಉರುಳುತ್ತಿರುವ



ಚಿತ್ರ ಬಿಡಿಸುತ್ತಿರುವ ಟಿಬೆಟನ್ ಮಹಿಳೆ

ಬದುಕಿನೊಂದಿಗೆ ಅವರು ಹೊಂದಿಕೊಂಡ ಪರಿಗೆ ಸಾಕ್ಷಿಯಂತಾಗಿದೆ.

ಅವರು ತಮ್ಮ ದೇಶದ ಬಾವುಟ, ನೋಟು, ಕೈಲಾಸ, ಮಾನಸ ಸರೋವರಗಳನ್ನೆಲ್ಲ ನೋಡುವುದು ತೂಗು ಹಾಕಿರುವ ಪಟಗಳಲ್ಲೇ. ಅಲ್ಲಿರುವ ಸ್ಕೂಲಲ್ಲಿ ಪಾಠ ಕಲಿಸಿ ಜನಪದ ನೃತ್ಯ ಮಾಡಿದ ಮಕ್ಕಳೊಂದಿಗೆ ಪಟ ತೆಗೆಸಿಕೊಂಡ ಶಿಕ್ಷಕಿಯೇ ಇನ್ನೊಂದು ಕೋಣೆಯಲ್ಲಿ ಹಳೆಯ ಮಗ್ಗವೊಂದರಲ್ಲಿ ನೇಯುತ್ತ ಕುಳಿತಿದ್ದನ್ನು ನೋಡಿದೆ. ಆಕೆ ಹಂಬಲಿಸುವುದು ಕಳೆದುಹೋದ ಬದುಕನ್ನೋ? ಇನ್ನಾವತ್ತೋ ಬರಲಿರುವ ಗಳಿಗೆಯನ್ನೋ? ನಾವು ಬದುಕಿದ ಕಾಲವೇ ನಮ್ಮೆದಿರು ಹೆಪ್ಪುಗಟ್ಟಿದ್ದನ್ನು ನೋಡಿ ಅವರಿಗೆ ಎಷ್ಟು ಸಂಕಟವಾಗಿರಬಹುದೆಂದು ಊಹಿಸಿದೆ.

ಹಳೆಯ ಸಾಮಾನುಗಳಿಂದ ತುಂಬಿದ ವೃದ್ಧರ ಮುರುಕುಮನೆಗಳು ಯಾರೋ ಜೋಡಿಸಿಡಲು ಮರೆತುಹೋದ ಮನೆಗಳ ಹಾಗೆ ಬೇಡದ–ಬೇಕಿದ್ದ ವಸ್ತುಗಳಿಂದ ಕಿಕ್ಕಿರಿದು ತುಂಬಿದ್ದವು. ಬೇರಾವುದೇ ಊರಿನಲ್ಲಿ ಕಾಣುವ ಹಾಗೆ, ಅಲ್ಲಿನ ಹಲವು ಮನೆಗಳ ಗೋಡೆ ಬಾಗಿಲುಗಳ ಮೇಲೆ 'ಹ್ಯಾಪಿ ನ್ಯೂ ಇಯರ್' ಶುಭಾಶಯಗಳು ಕಾಣಿಸುತ್ತಿದ್ದವು. ಟಿಬೆಟನ್ನರ ಹೊಸವರ್ಷ ಲೋಸಾರ್ ಅನ್ನು ಸ್ವಾಗತಿಸಿದ ಬರಹಗಳನ್ನು ಕಂಡಾಗ, ಅವರು ಬಂದಿರುವ ಹೊಸವರ್ಷಕ್ಕೆ ಸ್ವಾಗತಿಸುತ್ತಿದ್ದಾರೋ ಬರಲಿರುವ ಹೊಸವಸಂತವನ್ನು ಆಹ್ವಾನಿಸುತ್ತಿದ್ದಾರೋ ಎಂಬ ಯೋಚನೆ ಸುಳಿದು ಹೋಯಿತು. ಟಿಬೆಟಿನ ಹೊಸವಸಂತ ಶುರುವಾಗುವುದು ಯಾವಾಗ?

ದೇಶ–ಭಾಷೆ, ಮನೆ–ಊರು–ಗಡಿಗಳ ಹಲವು ಗಂಟು ನಂಟುಗಳನ್ನು ಹೊಸ ರೀತಿಯಲ್ಲಿ ಪರಿಭಾವಿಸುವ ನೋಟ ಸಿಕ್ಕಿದ್ದು ನಾನು ಸಿಕ್ಕಿಂ ಪ್ರವಾಸ ಮುಗಿಸಿ ಬಂದ ನಂತರ. ಯಾವ ಯಾಕೂಬ್ ಅಶ್ರಫಿಯವರನ್ನು ನೆನವರಿಸಿಕೊಂಡು ಸಿಕ್ಕಿಂ ಪ್ರವಾಸ ಮುಗಿಸಿದ್ದೆನೋ ಅವರು ರಮಜಾನಿನ ನಂತರದ ದಿನ ಮನೆಗೆ ಬಂದಿದ್ದರು. ಇದೊಂದು ಅಪೂರ್ವ ಅನಿರೀಕ್ಷಿತ ಭೇಟಿ. ಸುಮಾರು 12 ವರ್ಷಗಳ ಹಿಂದೆ ಅವರು ಇಂಥದೇ ಹಬ್ಬವೊಂದರ ದಿನ ಈದ್ಗಾದಲ್ಲಿ ನಿಂತು 'ನಮ್ಮ ದೇಹ ಇಲ್ಲಿಯೇ, ಇಲ್ಲಿಯೇ ಮಣ್ಣಾಗುತ್ತದೆ' ಎಂಬ ಅದ್ಭುತ ಭಾಷಣ ಮಾಡಿದ್ದರು. ನಾವು–ಅವರು ಎಂಬ ಗೆರೆಗಡಿಗಳು ಗಟ್ಟಿಯಾಗುತ್ತಿದ್ದ ಕಾಲದಲ್ಲಿ, ನಾವು ಸತ್ತರೂ ನಮ್ಮ ದೇಹ ಇಲ್ಲಿಯೇ ಮಣ್ಣಾಗಿ ಆತ್ಮ ಇಲ್ಲಿನ ಗಾಳಿಯಲ್ಲಿ ಸುಳಿದಾಡುತ್ತ ಸ್ವರ್ಗವನ್ನು ಹುಡುಕುತ್ತಿರುತ್ತದೆ ಎಂಬ ಅರ್ಥದ ಅವರ ಭಾಷಣವನ್ನು ನಾನು ಒಂದು ಲೇಖನವನ್ನಾಗಿ ಪ್ರಕಟಿಸಿದ್ದೆ. ಅದನ್ನು ಓದಿದ ಯು.ಆರ್. ಅನಂತಮೂರ್ತಿಯವರು ಈ ಲೇಖನವನ್ನು ಇಂಗ್ಲಿಷಿನಲ್ಲಿ ಬರೆದು ಭಾರತದ ಇತರ ಭಾಷೆಗಳಿಗೆ ಅನುವಾದವಾಗುವಂತೆ ಮಾಡಬೇಕು ಎಂದಿದ್ದರು.

ಈಗ ನೋಡಿದರೆ ಅವರು ಸಿಲಿಗುರಿಯಿಂದ ದುರ್ಗಕ್ಕೆ ವಾಪಸಾಗಿ ರಮಜಾನಿನ ಪವಿತ್ರ ಮಾಸವನ್ನು ಪೂರ್ತಿ ಇಲ್ಲಿಯೇ ಕಳೆದಿದ್ದರು. ಯಾವ ಈದ್ಗಾದಲ್ಲಿ ತಾವೇ ಪ್ರಧಾನ ಇಮಾಮರಾಗಿ ಎಲ್ಲರಿಗಿಂತ ಮುಂಚೆ ನಿಂತು ನಮಾಜು ಮಾಡಿಸಿದ್ದರೋ ಅದೇ ಕಡೆ ಸಾಮಾನ್ಯರ ಹಾಗೆ ಎಲ್ಲರ ಹಿಂದೆ ನಿಂತು ನಮಾಜು ಮಾಡಿದ್ದರು. ಇಮಾಮತನ್ನು ಮುಗಿಸಿ ತಮ್ಮೂರಿಗೆ ಹೋಗಿದ್ದರೂ ನಮ್ಮೂರಿನ ಜನ ಅವರ ಕಂಚಿನ ಕಂಠ, ಅವರು ಗುಡುಗುಗಳು ಗಡಚಿಕ್ಕುವಂತೆ ಮಾಡುತ್ತಿದ್ದ ಶುಕ್ರವಾರದ ಭಾಷಣಗಳು, ಅವುಗಳ ಮಧ್ಯೆ ಪಾಯಸದಲ್ಲಿ ಸಿಗುವ ಹುರಿದ ಗೋಡಂಬಿಯಂಥ ಶಾಯರಿಯ ತುಣುಕುಗಳು ಎಲ್ಲವನ್ನೂ ನೆನಪಿಟ್ಟುಕೊಂಡು ಅವರು ಎಲ್ಲೇ ಇರಲಿ ರಮಜಾನಿನ ಮಾಸವನ್ನು ಇಲ್ಲಿಯೇ ಕಳೆಯಬೇಕೆಂದು ತಿಂಗಳೊಪ್ಪತ್ತಿಗೆ ಬೇಕಾದ ಎಲ್ಲ ವಸತಿವ್ಯವಸ್ಥೆ ಮಾಡಿ ಇರಿಸಿಕೊಂಡಿದ್ದರು. ಅಂದರೆ ನಾನು ಸಿಲಿಗುರಿಯಲ್ಲಿ ಅವರನ್ನು ನೆನೆಯುತ್ತಿದ್ದಾಗ ಅವರು ನಮ್ಮೂರಿನಲ್ಲಿದ್ದರು.

ವಿಚಿತ್ರವೆಂಬಂತೆ ನಾನು ಅವರೂರಿನ ಬಗ್ಗೆ ಹೇಳಿದರೆ ಅವರು, ನಮ್ಮೂರು ಅವರಿಗೀಗ ಎಂದಿಗೂ ತವರಾಗಿರುವ ಬಗ್ಗೆ ಹೇಳಿದರು. ನಾನು, ನನ್ನ ತಮ್ಮ–ಮಾವ–ಚಿಕ್ಕಪ್ಪಂದಿರು ಅವರ ಭಾಷಣ ಬೋಧನೆಗಳು ಈಗಲೂ ಕಿವಿಯಲ್ಲಿ ಗುಣುಗುಣಿಸುತ್ತಿರುವ ಬಗ್ಗೆ ಮಾತಾಡಿಕೊಂಡೆವು. ಅವರು, ಇಲ್ಲಿ ಎಷ್ಟು ಜನ ಪ್ರೀತಿ ತೋರಿದರೂ ಮಗಳಿಗೆ ಗಂಡು ಹುಡುಕಲು, ಅವಳಿಗೆ ಮದುವೆ ಮಾಡಿಕೊಡಲು ತಮ್ಮೂರಿಗೆ ಮತ್ತೆ ಮರಳಿ ಹೋಗಲೇಬೇಕಾಗಿ ಬಂದ ಅನಿವಾರ್ಯತೆಯ ಬಗ್ಗೆ ಹೇಳಿದರು. ಊರಲ್ಲಿ ಭೂಮಿಯಿಲ್ಲ, ಅವರ ವಯಸ್ಸಿನ ಗೆಳೆಯರಿಲ್ಲದಿದ್ದರೂ ಸಾಗುತ್ತಿರುವ ಬದುಕನ್ನು ಕುರಿತು ವಿವರಿಸುತ್ತಿದ್ದರು. ಹಾಗಿದ್ದರೂ ಅವರ ಎಂಬಿಎ ಮಾಡಿದ ಮಗ ಬೆಂಗಳೂರಿನಲ್ಲಿ ಕಂಪನಿಯೊಂದರಲ್ಲಿ ನೌಕರಿ ಹಿಡಿದು ಜೀವನ ಸಾಗಿಸುತ್ತಿರುವ ಬಗ್ಗೆ ನೆಮ್ಮದಿಯಿದ್ದಂತೆ ಕಾಣುತ್ತಿತ್ತು. ತಮ್ಮೂರು ಸಿಲಿಗುರಿಯಲ್ಲಿ ಸಿಗದ ಶಿಕ್ಷಣ, ಉದ್ಯೋಗಾವಕಾಶಗಳು ಅವರ ಬದುಕನ್ನು ಇನ್ನೊಂದು ದಿಕ್ಕಿಗೆ ಕೊಂಡೊಯ್ಯುತ್ತಿರುವ ಬಗ್ಗೆ ಅವರ ಮನಸ್ಸಿನಲ್ಲಿ ವಿಷಾದವೂ ವಿಸ್ಮಯವೂ ಒಟ್ಟಿಗೇ ಕೂಡಿಕೊಂಡ ಹಾಗೆ ಕಾಣುತ್ತಿತ್ತು. ನನಗೆ 'ನಾವು ನಿಲ್ಲುವ ನೆಲೆ ಎಲ್ಲಿದೆ?', 'ನಿಂತ ನೆಲವು ನಮ್ಮದೇ?' ಎಂಬ ಪ್ರಶ್ನೆಗಳು ಕಾಡುತ್ತಿದ್ದವು.

ಪ್ರತಿಕ್ರಿಯಿಸಿ: feedback@sudha.co.in